ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಅಥಣಿ

ಸಿ.ಸಿ. ನಂಃ 4500/2022

ಫಿರ್ಯಾದುದಾರರು - ಕರ್ನಾಟಕ ರಾಜ್ಯ,
ಅಥಣಿ ಪೋಲಿಸರಿಂದ

- ವಿರುದ್ದ-

ಆರೋಪಿತ - 1) ಮೈಬೂಬ ಗುಲಾಬ ಡಾಂಗೆ ಹಾಗೂ ಇನ್ನೊಬರು

**ಆರೋಪಣೆ**

ನಾನು ಶ್ರೀ ಓಂಕಾರ ಮೂರ್ತಿ, ಬಿ.ಕಾಂ. ಎಲ್ಎಲ್.ಬಿ, ಪ್ರಧಾನ ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ. ಅಥಣಿ, ಈ ಮೂಲಕ ಆರೋಪಿತರ ಮೇಲೆ ಮಾಡಿದ ಆರೋಪಣೆ ಏನೆಂದರೆ,

ಆರೋಪಿ ನಂಃ 2) ಸಂಜಯ ಬೂಪಾಲ ಗಾವಡೆ,
ವಯಾಃ **45** ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ವಿಷ್ಣುವಾಡಿ, ತಾಃ ಅಥಣಿ.

.. ಆರೋಪಿ

ಈ ಕೆಳಗಿನಂತೆ ಆರೋಪಣೆಯನ್ನು ಹೊರೆಸಿದ್ದೇನೆ.

ದಿನಾಂಕಃ 23.05.2022 ರಂದು 05-30 ಗಂಟೆ ಸುಮಾರಿಗೆ ಅಥಣಿ ಪೋಲಿಸ ಠಾಣಾ ಸರಹದ್ದಿನ, ವಿಷ್ಣುವಾಡಿ ಗ್ರಾಮದಲ್ಲಿ ಮಾಸೋಬಾ ಗುಡಿ ಸಮೀಪ ವಿಷ್ಣುವಾಡಿ-ಮದಭಾಂವಿ ಸಾರ್ವಜನಿಕ ರಸ್ತೆಯ ಮೇಲೆ, 2ನೇ ಆರೋಪಿಯಾದ ನೀವು ವಾಹನ ಚಾಲನಾ ಅನುಜ್ಞಾ ಪರವಾನಿಗೆ ಪತ್ರ ಹೊಂದದೆ, ಮೋಟರ ಸೈಕಲ ನಂಃ ಕೆಎ**-23/**ಇಪಿ**-3163** ನೇದ್ದನ್ನು ರಸ್ತೆಯ ಮೇಲೆ ಚಲಾವಣೆ ಮಾಡಿರುವಿರಿ, ಇದು ಮೋಟಾರು ವಾಹನ ಕಾಯ್ದೆ ಕಲಂಃ **3** ಸಹ ಕಲಂಃ **181** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, **2**ನೇ ಆರೋಪಿಯಾದ ನೀವು ನಿಮ್ಮ ಮಾಲ್ಕಿಯ ಮೋಟರ ಸೈಕಲ ನಂಃ ಕೆಎ**-23/**ಇಪಿ**-3163** ನೇದ್ದಕ್ಕೆ ವಿಮಾ ಪಾಲಸಿ ಮಾಡಿಸದೇ, ಸದರಿ ಮೋಟಾರ ಸೈಕಲನ್ನು ರಸ್ತೆಯ ಮೇಲೆ ಚಲಾವಣೆ ಮಾಡಿರುವಿರಿ, ಆ ಮೂಲಕ ನೀವು ಮೋಟಾರು ವಾಹನ ಕಾಯ್ದೆ ಕಲಂಃ **146** ಸಹ ಕಲಂಃ **196** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಪ್ರಶ್ನೆಃ **1 -** ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ **?**

ಆರೋಪಿ **:**

ಪ್ರಶ್ನೆಃ **2 -** ಸದರಿ ಆಪಾದನೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆಯಾಗಬಯಸುವಿರೋ**?**

ಆರೋಪಿ **:**

[ಈ ಆಪಾದನೆಯನ್ನು ಈ ದಿನ ದಿನಾಂಕ 05.06.2026 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿದೆ]

ದಿನಾಂಕಃ **05/06/2026.**

**ಪ್ರಧಾನ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ಅಥಣಿ.**